ನಮ್ಮೂರಲ್ಲಿ ಶಂಭು ಎನ್ನುವವನೊಬ್ಬ ಇದ್ದಾನೆ. ಅವನು ಇದ್ದಾನೆ ಯಾಕೆಂದರೆ ಊರಿನವರಿಗೆ ಅವನು ಬೇಕು. ಅವನ ಹೆಸರೂ ಹಾಗೆಯೇ. ಜನರ ಕೆಲಸವನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ಮಾಡುವುದನ್ನೇ ತನ್ನ ಧರ್ಮವೆಂದು ತಿಳಿದುಕೊಂಡ ಅವನನ್ನು ಮುಲಾಜಿಲ್ಲದೇ ಉಪಯೋಗಿಸಿಕೊಳ್ಳುವ ಆ ಸಮಾಜ ಇಟ್ಟ ಹೆಸರೇ ಶಂಭು. ಒಂದು ವೇಳೆ ಅಂತಹವನೊಬ್ಬ ತಮ್ಮ ನಡುವೆ ಇಲ್ಲದಿದ್ದಲ್ಲಿ ಸಮಾಜ ಸೃಷ್ಟಿ ಮಾಡುತ್ತದೆ. ಯಾಕೆಂದರೆ ಅದಕ್ಕೆ ಅಂತಹವನೊಬ್ಬನ ಅಗತ್ಯವಿದೆ. ಬಿಟ್ಟಿ ಕೆಲಸ ಮಾಡಿ ಫಲದಲ್ಲಿ ಪಾಲು ಕೇಳದ, ಕೊನೆಗೆ ಮಾಡಿದ ಕೆಲಸಕ್ಕೆ ಮಜೂರಿಯನ್ನೂ ಕೇಳದ ಜನವೊಂದಿರುವುದಾದರೆ ಯಾರಿಗೆ ಬೇಡ ಹೇಳಿ. ಅವನೇ ನಮ್ಮ ಶಂಭು.

ಊರಿನಲ್ಲಿ ಯಾರ ಮನೆಯಲ್ಲಾದರೂ ಮದುವೆ ಮುಂಜಿಯಂತಹ ಶುಭ ಸಮಾರಂಭವೆಂದರೆ ಸಾಕು. ಅಲ್ಲಿ ಮೂರು ದಿನ ಮುಂಚೆಯೇ ಶಂಭು ಹಾಜರು. ಅವ ಕಣ್ಣಳತೆಯಲ್ಲಿ ಎಲ್ಲಿಯೂ ಇಲ್ಲವೆಂದಾದಲ್ಲಿ ಒಂದು ಸುದ್ದಿ ಹೊರಡಿಸಿದರೆ ಸಾಕು. 'ನಮ್ ಶಂಭು ಎಲ್ಲಿ ಕಾಣಿಸ್ತಾ ಇಲ್ಲವಲ್ಲ' ಎಂದು ತಮ್ಮ ಕೆಲಸ ಹಗುರ ಮಾಡಿಕೊಳ್ಳುವ ಆತುರದಲ್ಲಿದ್ದ ಆ ಮನೆಯ ಆಳು ಕಾಳುಗಳಲ್ಲಿ ಯಾರಾದರೂ ಹೇಳಿದರೂ ಆಯ್ತು. ಆ ಮಾತು ಗಾಳಿಯಲ್ಲಿ ತೇಲುತ್ತ ಹೋಗಿ ನಮ್ಮ ಶಂಭುವಿನ ಕಿವಿಯ ಮೇಲೆ ಬೀಳುತ್ತದೆ ಮತ್ತು ಮರು ಕ್ಷಣವೇ ಅವನು ಅಲ್ಲಿ ಹಾಜರು. ಮತ್ತೆಲ್ಲಾ ಅವನದ್ದೇ ಕಾರುಭಾರು. ಮನೆಯೆದುರಿಗಿನ ನೆಲ ಸಾರಿಸಲು ಬೇಕಾಗುವ ನೀರಿನಿಂದ ಹಿಡಿದು ಆ ನೆಲ ಸಾರಿಸಿ ಸುಸ್ತಾದವರಿಗೆ ಕುಡಿಯಲು ಬೇಕಾಗುವ ಬೆಲ್ಲ ನೀರೂ ಸೇರಿ ಎಲ್ಲ ರೆಡಿ. ಚಪ್ಪರ ಕಟ್ಟುವವರಿಗೆ ನಿರ್ದೇಶನ ಕೊಡುತ್ತಾನೆ. ಬೇಕೆಂದರೆ ದಪ್ಪ ಅಡಕೆ ಮರದ ತೊಲೆಗಳನ್ನು ಏರಿಸಲು ಹೆಗಲು ಕೊಡುತ್ತಾನೆ. ಆದರೆ, ಎಲ್ಲ ಮುಗಿದು ಚಪ್ಪರದ ಕೆಲಸದವರೆಲ್ಲ ಕೈ ಕಾಲುಗಳಿಗೆ ನೀರು ಸಿಂಪಡಿಸಿಕೊಂಡು ಉಸ್ಸಪ್ಪಾ... ಎನ್ನುತ್ತ ಊಟಕ್ಕೆ ಕೂರುವಾಗ ಮಾತ್ರ ಅವ ಕಾಣುವುದಿಲ್ಲ. ದಪ್ಪ ದಪ್ಪ ತಪ್ಪಲೆಯಲ್ಲಿ ಅನ್ನ ಸಾರು ಮಾಡಿ ಬಡಿಸುವ ಯಜಮಾನರ ಮನೆಯವರೂ ಅವ ಎಲ್ಲಿ ಎಂದು ಕೇಳುವುದಿಲ್ಲ. ಕೆಲಸ ಮುಗಿದ ಮೇಲೆ ಅವನ ಅಗತ್ಯ ಯಾರಿಗೂ ಇರುವುದಿಲ್ಲವಾದ್ದರಿಂದ ಯಾರೂ ಅವನನ್ನು ಕರೆದಿರುವುದಿಲ್ಲವಾದ್ದರಿಂದ ಅವ ತನ್ನಷ್ಟಕ್ಕೆ ಹೊರಟಿರುತ್ತಾನೆ ಅಲ್ಲಿಂದ. ಅದೆಲ್ಲೋ ಅಂಗಡಿ ಬೀದಿಯಲ್ಲಿ ಸಿಗುವ ಹತ್ತು ರೂಪಾಯಿಯ ಸಾಂಬಾರನ್ನವನ್ನೋ ಅಥವಾ ಎರಡು ರೂಪಾಯಿಯ ಪುರಿಯನ್ನೋ ತಿಂದು ಹೊಟ್ಟೆ ತುಂಬಿಸಿಕೊಂಡಿರುತ್ತಾನೆ. ಯಾರಿಗಾದರೂ ಮತ್ತೆ ಅವನ ನೆನಪಾಗುವುದು ಮಾರನೆ ದಿನ ಇನ್ಯಾವುದೋ ಕೆಲಸಕ್ಕೆ ಅಗತ್ಯ ಬಿದ್ದಾಗಲೇ.

ಸಾವಿನ ಮನೆಯಲ್ಲೂ ಅಷ್ಟೆ. ನಮ್ಮ ಶಂಭು ಇದ್ದರೇ ಸಾಯಲಿಕ್ಕೆ ಬಿದ್ದವರು ಶಾಂತಿಯಿಂದ ಕಣ್ಣು ಮುಚ್ಚುವುದು ಎಂಬವರೆಗೆ ಪ್ರತೀತಿ. ಸಾಯುವವರು ಕಾಯಿಲೆ ಮಲಗಿದ ದಿನದಿಂದ ಶಂಭು ಆ ಮನೆಯ ಸುತ್ತ ಮುತ್ತ ಸುಳಿದಾಡುತ್ತಲೇ ಇರಬೇಕು. ಕರೆದ ಕೂಡಲೇ ಬರಲಾಗದ ಡಾಕ್ಟರಿಂದ ಔಷಧಿ ತರುವುದರಿಂದ ಹಿಡಿದು ಹಾಸಿಗೆ ಹಿಡಿದು ಮಲಗಿದ ರೋಗಿಯ ಹೇಲು ಉಚ್ಚೆ ಬಳಿಯುವುದರವರೆಗೆ ಶಂಭುವೇ ಆಗಬೇಕು. ಆ ಪರಿಸ್ಥಿತಿ ತಲುಪಿದ ಮೇಲೆ ಅತಿ ಶೀಘ್ರದಲ್ಲಿಯೇ ಕಣ್ಣು ಮುಚ್ಚಿಯೇ ಬಿಡುತ್ತಾರೆ. ಆಗಂತೂ ಶಂಭು ಅಲ್ಲಿರಲೇಬೇಕಲ್ಲ. ಚಟ್ಟ ಕಟ್ಟಲು ಬೇಕಾದ ಸಾಮಾನು ಒಟ್ಟು ಮಾಡುವುದರಿಂದ ಹಿಡಿದು ಕೊನೆಗೆ ಚಟ್ಟದ ಮೇಲೆ ಮಲಗಿಸಿದ ಹೆಣವನ್ನು ಆಚೀಚೆ ಹೊರಳಿಸುತ್ತ ಅಗತ್ಯದ ಜಾಗಗಳಲ್ಲಿ ಕಟ್ಟು ಕಟ್ಟುವವರೆಗೆ ಅವನು ಬೇಕು. ಹೆಣ ಹೊರಲು ಅವನಿಗೆ ಹಕ್ಕಿಲ್ಲ. ಹೆಣಕ್ಕೆ ಕೊಳ್ಳಿಯಿಡಲೂ! ಸಾವಿನ ಮನೆಯಲ್ಲಿ ದುಡಿದವರಿಗೆ ಹಸಿವು ಹೆಚ್ಚು.